ಮಾಡುತ್ತಿದ್ದಾರೆ. ಅವರ ಬೇಡಿಕೆಗಳು ಏನು ಎಂದು ಕೇಳುವ ಸೌಜನ್ಯವೂ ಸರ್ಕಾರಕ್ಕೆ ಇಲ್ಲ. ಆದರೆ ದೆಹಲಿಯ ರೈತ ಚಳವಳಿ ಯಶಸ್ವಿನ ಕೆಲವು ಮೈಲುಗಲ್ಲುಗಳನ್ನು ನಿರ್ಮಿಸಿದೆ. ರೈತ ಈ ದೇಶದ ಸ್ಮೃತಿಪಟಲದಿಂದ ಮಾಸಿದ್ದ. ಈಗ ಮತ್ತೆ ಅವನು ಆ ಪಟಲದಲ್ಲಿ ಅಚ್ಚೊತ್ತಿ ಉಳಿಯುವಂತೆ ಆಗಿದೆ. ಅದು ಈ ಆಂದೋಲನದ ಯಶಸ್ವಿನ ಘಟ್ಟ. ಪಂಜಾಬ್ ಮತ್ತು ಹರಿಯಾಣ ರಾಜ್ಯಗಳನ್ನೇ ನೋಡಿದರೆ ರೈತರ ಏಕತೆ ಮತ್ತು ಅವರ ಸಂಘಟನೆಯ ಶಕ್ತಿ ಅರ್ಥ ಆಗುತ್ತದೆ. ಸರ್ಕಾರ ರೈತರು ಸಂಘಟಿತರಾಗಲು ಅವಕಾಶ ಮಾಡಿಕೊಟ್ಟಿದೆ. ಇಲ್ಲಿ ಹಿಂದೂ– ಸಿಖ್– ಮುಸ್ಲಿಂ ಎಂಬ ಭಿನ್ನತೆಯಾಗಲಿ ಜಾತಿ–ವರ್ಗಗಳ ವೈರುಧ್ಯಗಳಾಗಲಿ ಇಲ್ಲ. ಜನ ಜಾತಿ ಮೀರಿ ಒಂದು ವೇದಿಕೆಯ ದನಿಯಾಗಿದ್ದಾರೆ. ಇದು ಈ ಚಳವಳಿಯ ದೊಡ್ಡ ಸಾಧನೆ.

ರೈತ ಚಳವಳಿ ತನ್ನ ಶಕ್ತಿಯನ್ನು ಕಳೆದುಕೊಂಡಿಲ್ಲ, ವಿಕಾಸವಾಗಿದೆ. ಈ ಚಳವಳಿಯ ಮೊದಲ ಚರಣ ಪಂಜಾಬಿಗೆ ಮಾತ್ರ ಸೀಮಿತವಾಗಿತ್ತು. ಕ್ರಮೇಣ ಅದು ದೇಶದ ರಾಜಧಾನಿಯ ಬಾಗಿಲಿಗೆ ಬಂದಿದ್ದು ಎರಡನೇ ಚರಣ. ಕಳೆದ ಜನವರಿ 26ರ ನಂತರ ದೇಶವ್ಯಾಪಿ ಮಿಂಚಿನ ಸಂಚಲನವನ್ನು ಅದು ಉಂಟುಮಾಡಿರುವುದು ಮೂರನೇ ಚರಣ. ವ್ಯವಸ್ಥೆ ಚಳವಳಿಯನ್ನೇ ಬುಡಮೇಲು ಮಾಡಲು ಯತ್ನಿಸಿತು. ಅದರ ಬದಲಿಗೆ ಚಳವಳಿ ಮತ್ತಷ್ಟು ಬಲವಾಯಿತು. ಸತ್ಯ ತಿಳಿದು ಪ್ರತಿಭಟನಾಕಾರರ ಸಂಖ್ಯೆಯಲ್ಲಿ ಇನ್ನೂ ಹೆಚ್ಚಳವಾಯಿತು. ಈಗ ಬೆಲೆ ನಿಗದಿಪಡಿಸಲು ನಾಲ್ಕನೇ ಚರಣಕ್ಕೆ ಕಾಲಿಟ್ಟಿದ್ದೇವೆ. ಆ ನಿಟ್ಟಿನಲ್ಲಿ ಕರ್ನಾಟಕ – ಪಶ್ಚಿಮ ಬಂಗಾಳದಲ್ಲಿ ಚಳವಳಿಯನ್ನು ಕಟ್ಟಬೇಕಿದೆ. ದೇಶ ವ್ಯಾಪಿ ಈ ಆಂದೋಲನ ವಿಸ್ತಾರವಾಗುತ್ತಿದೆ. ಎಂಟು ಮೋರ್ಚಾಗಳಿದ್ದ ನಾವು 80 ಮೋರ್ಚಾಗಳಾಗಿದ್ದೇವೆ. ಕೆಲವೇ ದಿನಗಳಲ್ಲಿ 800 ಮೋರ್ಚಾಗಳಾಗುತ್ತೇವೆ.

**◆ ಕೃಷಿಕರ ಸಮಸ್ಯೆ ಬೇರೆ ಬೇರೆ ಇದ್ದರೂ, ಸರ್ಕಾರ ರೂಪಿಸುತ್ತಿರುವ ಕಾಯ್ದೆಗಳು ದೇಶವ್ಯಾಪಿ ಒಂದೇ ರೂಪದಲ್ಲಿ ಜಾರಿಗೊಳ್ಳುತ್ತವೆ. ಆದರೆ ಕೆಲವೇ ರಾಜ್ಯದ ರೈತರು ಮಾತ್ರ ಏಕೆ ಕಾಯ್ದೆಯನ್ನು ಪ್ರಶ್ನಿಸುತ್ತಾರೆ?**

ಏಕ ರೂಪ ಕಾಯ್ದೆ ಆಗಿದ್ದರೂ ಅದು ದೇಶವ್ಯಾಪಿ ಏಕರೂಪ ಪರಿಣಾಮ ಬೀರುವುದಿಲ್ಲ. ಏಕೆಂದರೆ, ಹಲವಾರು ರಾಜ್ಯಗಳಲ್ಲಿ ಎಂಪಿಎಂಸಿ – ಮಂಡಿಗಳೇ ಇಲ್ಲ. ಪಶ್ಚಿಮ ಬಂಗಾಳದಲ್ಲಿಯೂ ಮಂಡಿ ವ್ಯವಸ್ಥೆ ಸಣ್ಣ ಪ್ರಮಾಣದಲ್ಲಿದೆ. ಕೆಲ ರಾಜ್ಯಗಳಲ್ಲಿ ಮಂಡಿ ವ್ಯವಸ್ಥೆ ರೈತರಿಗೆ ಒಳ್ಳೆಯ ಸೌಲಭ್ಯಗಳನ್ನು ನೀಡಿವೆ. ಹರಿಯಾಣ– ಪಂಜಾಬ್‌ನಲ್ಲಿ ಶೇ 70ರಿಂದ 80ರಷ್ಟು ರೈತರು ಮಂಡಿಯ ಸೌಲಭ್ಯ ಪಡೆಯುತ್ತಿದ್ದಾರೆ. ಕರ್ನಾಟಕದಲ್ಲಿ ಅದರ ಪ್ರಮಾಣ ಕೇವಲ ಶೇ. 28ರಷ್ಟು ಇದೆ. ಬಿಹಾರದಲ್ಲಿ ಅದರ ಪ್ರಮಾಣ ಶೇ. 1ರಷ್ಟಿದೆ. ಹೀಗಾಗಿ ರೈತರು ಭಿನ್ನವಾಗಿ ತಮ್ಮ ಪ್ರತಿಕ್ರಿಯೆಯನ್ನು ನೀಡುತ್ತಿದ್ದಾರೆ. ಅದಕ್ಕೆ ಅದರದೇ ಆದ ಸಾಮಾಜಿಕ ಕಾರಣಗಳೂ ಇವೆ. ಮಂಡಿಯ ಅನುಕೂಲ ಅನುಭವಿಸುತ್ತಿರುವ ರೈತ ಅದನ್ನು ತಪ್ಪಿಸುವ ಹುನ್ನಾರ ಅರಿತು ತಿರುಗಿ ಬೀಳುತ್ತಿದ್ದಾನೆ. ಅಂತಹ ಉತ್ತಮ ಸೌಲಭ್ಯ ಅನುಭವಿಸದೆ ಇದ್ದವರಿಗೆ ಅದು ಗೊತ್ತಾಗುತ್ತಿಲ್ಲ.

ನಮ್ಮ ಚಳವಳಿಯಲ್ಲಿ ಯಾವ ರಾಜಕಾರಣವೂ ಇಲ್ಲ. ಹರಿಯಾಣ, ಉತ್ತರಪ್ರದೇಶ, ಕರ್ನಾಟಕವನ್ನೇ ನೋಡಿ. ಇಲ್ಲೆಲ್ಲ ಬಿಜೆಪಿ ಸರ್ಕಾರಗಳೇ ಇವೆ. ಮುಂದಿನ ವರ್ಷ ಉತ್ತರ ಪ್ರದೇಶದಲ್ಲಿ ವಿಧಾನಸಭೆ ಚುನಾವಣೆ ಇದೆ. ಹರಿಯಾಣದ ವಿಧಾನಸಭಾ ಚುನಾವಣೆ ಇನ್ನೂ ದೂರ ಇದೆ. ಆದರೆ ಹರಿಯಾಣದಲ್ಲಿ ಪ್ರತಿಭಟನೆಯ ತೀವ್ರತೆ ಉತ್ತರ ಪ್ರದೇಶಕ್ಕಿಂತ ಹೆಚ್ಚಿದೆ. ದಕ್ಷಿಣ ಭಾರತದಲ್ಲಿ ಕರ್ನಾಟಕದಲ್ಲಿಯೇ ಮೊದಲ ಬಾರಿಗೆ ಪ್ರತಿರೋಧ ವ್ಯಕ್ತವಾಗಿದೆ.

## ರೈತ ಚಳವಳಿ ನಾಯಕ
# ಯೋಗೇಂದ್ರ ಯಾದವ್
## ಸಂದರ್ಶನ

ಏಕೆಂದರೆ ಇಲ್ಲಿ ಮಂಡಿ ವ್ಯವಸ್ಥೆ ಇದೆ. ಇಲ್ಲಿನ ರೈತರಿಗೆ ತಾವು ಏನು ಕಳೆದುಕೊಳ್ಳುತ್ತೇವೆ ಎನ್ನುವುದು ಗೊತ್ತಾಗಿರುವುದರಿಂದಲೇ ಪ್ರತಿಭಟಿಸುತ್ತಿದ್ದಾರೆ.

**◆ ಮಂಡಿ ನಿರ್ಮೂಲನೆ ಮಾಡಲಾಗುತ್ತಿದೆ ಅಂತೀರಿ. ಹಾಗಾದರೆ ಇದರ ಹಿಂದೆ ಏನಾದರೂ ರಿಯಲ್ ಎಸ್ಟೇಟ್ ಕಣ್ಣು ಇದೆ ಎಂದು ಅನ್ನಿಸುತ್ತದೆಯಾ?**

ಖಂಡಿತ. ಮಂಡಿ ಸ್ಥಾಪನೆಯ ಕಾಲದಲ್ಲಿ ಅವು ಪಟ್ಟಣದ ಹೊರವಲಯದಲ್ಲಿ ಇದ್ದವು. ದಿನಗಳೆದಂತೆ ಅವುಗಳನ್ನು ಮೀರಿ ಪಟ್ಟಣ ವಿಸ್ತಾರಗೊಂಡಿವೆ. ಎಪಿಎಂಸಿ ವ್ಯವಸ್ಥೆಯನ್ನು ನಿಶ್ಶಕ್ತಿಗೊಳಿಸುವುದರ ಹಿಂದೆ ದೊಡ್ಡ ಕಾರ್ಪೊರೇಟ್ ರಾಜಕಾರಣ ಕೆಲಸ ಮಾಡುತ್ತಿದೆ. ಈಗಲಾಗಲೇ ಮಂಡಿಯಲ್ಲಿ ವಹಿವಾಟು ಶೇ. 25ರಷ್ಟು ಕಡಿಮೆ ಆಗಿದೆ. ವರ್ಷ ವರ್ಷವೂ ಅದರ ಪ್ರಮಾಣ ಕಡಿಮೆ ಆಗುತ್ತಾ ಒಂದು ದಿನ ಸಂಪೂರ್ಣ ನಾಶ ಆಗುತ್ತದೆ. ಆಗ ಖಾಸಗಿ ವ್ಯಕ್ತಿಗಳು ಮೆರೆಯುತ್ತಾರೆ. ದೊಡ್ಡ ದೊಡ್ಡ ಕಾರ್ಪೊರೇಟ್ ಕಂಪನಿಗಳು ಕಾಲಿಡುತ್ತವೆ. ನಂತರ ಸರ್ಕಾರ ಮಂಡಿಯಲ್ಲಿ ವಹಿವಾಟು ನಡೆಯುತ್ತಿಲ್ಲ ಎಂದು ರಾಗ ಹಾಡುತ್ತದೆ. ಈಗ ಸರ್ಕಾರಿ ಶಾಲೆಯಲ್ಲಿ ವಿದ್ಯಾರ್ಥಿಗಳು ಇಲ್ಲ ಎಂದು ಹೇಗೆ ‘ವಿಲೀನ’ ಎಂಬ ಮುಚ್ಚುವ ಕ್ರಿಯೆ ಮಾಡುತ್ತಿದೆಯೋ ಹಾಗೆಯೇ ಮಂಡಿ ವ್ಯವಸ್ಥೆ ಆಗುತ್ತದೆ. ಹತ್ತಾರು ಎಕರೆ ಭೂಮಿ ಹೊಂದಿರುವ ಎಪಿಎಂಸಿ ನಿಧಾನಕ್ಕೆ ತನ್ನ ಭೂ ಒಡೆತನವನ್ನು ಕಳೆದುಕೊಳ್ಳುವ ಹಂತವನ್ನು ತಲುಪುತ್ತದೆ.

**◆ ಕರ್ನಾಟಕದಲ್ಲಿ ರೈತ ಚಳವಳಿಗೊಂದು ಚರಿತ್ರೆ ಇದೆ. ಇಲ್ಲಿ ಕಿಸಾನ್ ಮೋರ್ಚಾ ಶಾಖೆಯನ್ನು ಆರಂಭಿಸುವ ಉದ್ದೇಶ ನಿಮಗೆ ಇದೆಯಾ?**

ಸಂಯುಕ್ತ ಮೋರ್ಚಾ ಕರ್ನಾಟಕದಲ್ಲಿ ಸಕ್ರಿಯವಾಗಿದೆ. ಇಲ್ಲಿನ ಹಲವು ರೈತ ಸಂಘಟನೆಗಳ ಜೊತೆ ಅದು ಸಮನ್ವಯವನ್ನೂ ಸಾಧಿಸಿದೆ. ಪ್ರಮುಖ ರೈತ ಸಂಘಟನೆಗಳೆಲ್ಲ ಒಂದಾಗಿ ತಮ್ಮ ಆಕ್ರೋಶದ ದನಿಯನ್ನು ಎತ್ತುತ್ತಿವೆ. ಅದು ವೈಯಕ್ತಿಕವಾಗಿ ನನಗೆ ಸಂತೋಷವನ್ನು ಉಂಟುಮಾಡಿದೆ. ಕರ್ನಾಟಕ ರೈತ ಸಂಘಟನೆಗಳು ಸಂಯುಕ್ತವಾಗಿ ತಮ್ಮ ಹೋರಾಟದ ಫಲವನ್ನು ಪಡೆಯುತ್ತವೆ. ಕರ್ನಾಟಕದಲ್ಲಿ ಮಾತ್ರವಲ್ಲ, ದೇಶವ್ಯಾಪಿ ‘ಸಂಯುಕ್ತ ಕಿಸಾನ್ ಮೋರ್ಚಾ’ ನಾಲ್ಕುನೂರಕ್ಕೂ ಅಧಿಕ ರೈತ ಸಂಘಗಳ ಜೊತೆ ಐಕ್ಯತೆಯನ್ನು ಸಾಧಿಸಿದೆ. ನಾನೇ ಕರ್ನಾಟಕದಲ್ಲಿ ಸುತ್ತಾಡಿದ್ದೇನೆ, ಅನೇಕ ಸಂಘಟನೆಗಳ ಜೊತೆ ಮಾತುಕತೆ ಮಾಡಿದ್ದೇನೆ. ಇಲ್ಲಿ ಕೆಲವರು ಬಂದಿಲ್ಲ, ಆದರೆ ನಮ್ಮ ಜೊತೆ ಅವರೂ ಹೆಜ್ಜೆ ಹಾಕುತ್ತಾರೆ. ಎಲ್ಲ ಸಂಘಟನೆಗಳು ಒಂದು ವೇದಿಕೆಗೆ ಬರುತ್ತವೆ. ನಮ್ಮ ಹೋರಾಟಕ್ಕೆ ಏಕ ನಾಯಕ ಬೇಕಿಲ್ಲ, ಏಕ ವೇದಿಕೆ ಬೇಕಿದೆ. ನಮ್ಮ ಹೋರಾಟದ ದಿಕ್ಕುದೆಸೆಯನ್ನು ರೂಪಿಸಲು ಒಂದು ಸಮಿತಿ ಇದೆ.

**◆ ಚಳವಳಿ ರಾಜಕೀಯದ ಭಾಗ ಎಂದು ಒಪ್ಪಿಕೊಳ್ಳುತ್ತೀರಿ. ಮುಂದಿನ ದಿನಗಳಲ್ಲಿ ರೈತ ಚಳವಳಿಯನ್ನು ಸಕ್ರಿಯ ರಾಜಕಾರಣಕ್ಕೆ ತೊಡಗಿಸುವ ಉದ್ದೇಶ ಇದೆಯೇ?**

ನನಗೆ ಭಿನ್ನ ದೃಷ್ಟಿಕೋನ ಇದೆ. ರೈತರೆಲ್ಲ ಒಂದು ರಾಜಕೀಯ ಪಕ್ಷದಲ್ಲಿ ಇರಬೇಕು ಎಂದು ಬಯಸುವುದಿಲ್ಲ. ರೈತರು ಎಲ್ಲ ರಾಜಕೀಯ ಪಕ್ಷಗಳ ಅಧಿಕಾರವನ್ನು ಹಿಡಿಯಬೇಕು. ಅವರು ಎಲ್ಲ ಪಕ್ಷದ ನಿಯಂತ್ರಣವನ್ನು ಸಾಧಿಸುವಂತೆ ಆಗಬೇಕು. ಮುಂದಿನ ಚುನಾವಣೆಯಲ್ಲಿ ಎಲ್ಲ ಪಕ್ಷಗಳ ಪ್ರಣಾಳಿಕೆಯ ಮುಖ್ಯಾಂಶ ರೈತರ ಬೇಡಿಕೆಗಳಾಗಿರಬೇಕು. ಬಿಜೆಪಿ, ಕಾಂಗ್ರೆಸ್, ಕಮ್ಯುನಿಸ್ಟ್ – ಪಕ್ಷ ಯಾವುದೇ ಇರಲಿ. ಅವು ಧರ್ಮ ಜಾತಿ ಅಜೆಂಡಾ ಬಿಟ್ಟು ‘ಕಿಸಾನ್ ಅಜೆಂಡಾ’ ಬಿಂಬಿಸುವಂತೆ ಆಗಬೇಕು. ರೈತರ ಚಳವಳಿ ಸಣ್ಣ ರಾಜಕಾರಣ ಮಾಡಬಾರದು. ರೈತರ ಪಕ್ಷವೊಂದು ಸ್ಥಾಪಿಸಿ ಮುಖ್ಯಮಂತ್ರಿ ಆಗುವುದು ಚಿಕ್ಕ ರಾಜಕಾರಣ. ನಾವು ದೊಡ್ಡ ರಾಜಕಾರಣ ಮಾಡಬೇಕು. ಯಾವತ್ತೂ ಪಕ್ಷದ ಅಜೆಂಡಾವನ್ನು ಹಿಡಿತದಲ್ಲಿ ಇಟ್ಟುಕೊಂಡಿರಬೇಕು. ಯಾವುದೇ ಚಳವಳಿಗಳು ಸಕ್ರಿಯ ಪಕ್ಷ ರಾಜಕೀಯಕ್ಕೆ ಇಳಿಯುವುದು ತುಂಬ ಅಪಾಯಕಾರಿ ನಿಲುವು ಎಂದು ನನಗೆ ಅನ್ನಿಸುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾವುದೇ ಚಳವಳಿಯೂ ರಾಜಕೀಯ ಪಕ್ಷವಾಗಿ ರೂಪಾಂತರವನ್ನು ಪಡೆಯಬಾರದು. ಯುವ ಆಂದೋಲನಗಳು, ಸ್ತ್ರೀಪರ ಆಂದೋಲನಗಳೂ ಯಾವುದೋ ಒಂದು ರಾಜಕೀಯ ಪಕ್ಷದಂತಾಗದೆ, ಇರುವ ಪಕ್ಷಗಳ ಅಜೆಂಡಾ ಬದಲಿಸುವ ಶಕ್ತಿಯಾಗಬೇಕು.

ಪ್ರತಿಕ್ರಿಯಿಸಿ: feedback@sudha.co.in

